ಓ.ಎಸ್. ನಂಃ **251/2013**
ಡಿ.ಡಬ್ಲ್ಯೂಃ **2**

ದಿನಾಂಕ **31-01-2026** ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ವಾದಿಯ ಪರ: ಶ್ರೀ ಬಿಬಿಕೆ ವಕೀಲರಿಂದಃ

12, 13 ಹಾಗೂ 15 ರಿಂದ 18 ರವರು ನಮ್ಮ ಕುಟುಂಬದ ಸದಸ್ಯರಾಗಿರುತ್ತಾರೆ ಎಂದರೆ ಸರಿ. ದಾವಾ ಸರ್ವೆ ನಂ.610-611 ರ ಜಮೀನಿಗೆ ಸಂಬಂಧಿಸಿದಂತೆ ನಮ್ಮ ಕುಟುಂಬದ ಮೇಲೆ ಇದೇ ನ್ಯಾಯಾಲಯದಲ್ಲಿ 8-10 ದಾವೆಗಳು ಇದ್ದಾವೆ ಎಂದರೆ ಸರಿಯಲ್ಲ. ನರೇಶ ತಂದೆ ಜೇಮ್ಲಾ ಎಂಬಾತ ನಮ್ಮ ವಿರುದ್ಧ ಒಂದು ದಾವೆ ದಾಖಲಿಸಿದ್ದರು ಎಂದರೆ ಸರಿ. ಮಾರಾಟಗಾರನ ಫೋಟೋ ಇಲ್ಲದ ಒಂದು ಖರೀದಿ ಪತ್ರವನ್ನು ನಾನು ಆ ದಾವೆಯಲ್ಲಿ ಹಾಜರು ಮಾಡಿದ್ದೆನು ಎಂದರೆ ಸರಿಯಲ್ಲ. ಸದರಿ ಖರೀದಿ ಪತ್ರಕ್ಕೆ ಈ ದಾವೆಯ 1 ನೇ ಪ್ರತಿವಾದಿ ಸಾಕ್ಷಿಯಾಗಿ ಸಹಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ.610-611 ರಲ್ಲಿನ ಅ ರಿಂದ ಈ ರವರಿಗಿನ ಹಿಸ್ಸೆಗಳ ಜಮೀನಿಗೆ ಸಂಬಂಧಿಸಿದಂತೆ ನಾವು ಮಾಡಿಕೊಂಡಿರುವ ಖರೀದಿ ಪತ್ರಗಳಿಗೆ ಈ ದಾವೆಯ 1 ನೇ ಪ್ರತಿವಾದಿಯ ಸಹಿಯನ್ನು ಸಾಕ್ಷಿಯಾಗಿ ಪಡೆದುಕೊಂಡಿದ್ದೇವೆ ಎಂದರೆ ಸರಿ. 1 ನೇ ಪ್ರತಿವಾದಿಗೆ ಮೋಸ ಮಾಡಿ ನಾವು ದಾವಾ ಜಮೀನಿಗೆ ಸಂಬಂಧಿಸಿದಂತೆ ಖರೀದಿ ಪತ್ರ ಸೃಷ್ಟಿಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ.

2. ನಿಡಿ-3 ರ ಖರೀದಿ ಪತ್ರವನ್ನು ಸಾಕ್ಷಿಗೆ ತೋರಿಸಿ ಅದರಲ್ಲಿನ 3 ನೇ ಸಾಕ್ಷಿದಾರ ದಶರತ್ ತಂದೆ ರಘುನಾಥರಾವ್ ದಡಂಗೆ ಎಂಬಾತ ಇರುತ್ತಾನೆ ಎಂದರೆ ಸಾಕ್ಷಿಯು ಸರಿ ಎಂದು ನುಡಿಯುತ್ತಾರೆ. ಸದರಿ ಸಾಕ್ಷಿದಾರ ನನ್ನ ತಮ್ಮ ಆಗಿರುತ್ತಾನೆ. ಸದರಿ ಖರೀದಿ ಪತ್ರದ 2 ನೇ ಸಾಕ್ಷಿದಾರರಾದ ಸೋಮ್ಲಾ ರವರು ಪತ್ರಕ್ಕೆ ಸಹಿ ಮಾಡಿಲ್ಲ ನಾವು ಮೋಸದಿಂದ ಬೇರೆಯವರ ಹೆಬ್ಬೆಟ್ಟಿನ ಗುರುತು ಹಾಕಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಖರೀದಿ ಪತ್ರದ 1 ಮತ್ತು 4 ನೇ ಸಾಕ್ಷಿದಾರರು ಬಾಸನಕೇರಿ ತಾಂಡಾದವರು ಆಗಿರುತ್ತಾರೆ ಹೊರತು ಮುಂಡರಗಿ ತಾಂಡಾದವರು ಆಗಿರುವುದಿಲ್ಲ ಎಂದರೆ ಸಾಕ್ಷಿ ಅದು ಒಂದೇ ತಾಂಡಾ ಆಗಿದ್ದು, ಎರಡು ಹೆಸರುಗಳು ಇವೆ ಎಂದು ನುಡಿಯುತ್ತಾರೆ. 2004-05 ರಿಂದ ಮುಂಡರಗಿ ತಾಂಡವನ್ನು ಬಾಸನಕೇರಿ ತಾಂಡ ಎಂದು ಸಹ ಕರೆಯುತ್ತಿದ್ದರು. ಮುಂಡರಗಿ ತಾಂಡವನ್ನು ಬಾಸನಕೇರಿ ತಾಂಡ ಎಂದು ಕರೆಯುತ್ತಿರಲಿಲ್ಲ ಎಂದರೆ

ಸರಿಯಲ್ಲ. ನಿಡಿ-3ರ ಖರೀದಿ ಪತ್ರವನ್ನು 1ನೇ ಪ್ರತಿವಾದಿ ಅಥವಾ ಆತನ ಮಕ್ಕಳು ಮಾಡಿಕೊಟ್ಟಿಲ್ಲ, ಅದು ನಕಲಿ ದಾಖಲೆ ಆಗಿರುತ್ತದೆ ಎಂದರೆ ಸರಿಯಲ್ಲ. ಮೋಸದಿಂದ ನಿಡಿ-3ರ ಖರೀದಿ ಪತ್ರ ಸೃಷ್ಟಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ವಾದಿಯೇ ಈವರೆಗೆ ದಾವಾ ಸದರಿ ಆಸ್ತಿಯ ಮಾಲಿಕ ಹಾಗೂ ಕಬ್ಜೆದಾರ ಆಗಿರುತ್ತಾರೆ ಎಂದರೆ ಸರಿಯಲ್ಲ. ನಮಗೆ ಈವರೆಗೆ ಸದರಿ ದಾವಾ ಆಸ್ತಿ ಎಲ್ಲಿದೆ ಎಂಬುದು ಗೊತ್ತಿಲ್ಲ ಎಂದರೆ ಸರಿಯಲ್ಲ. ಸದರಿ ದಾವಾ ಜಮೀನಿನಲ್ಲಿ ನಾವು ಬೇಳೆ ಬೆಳೆದಿರುವುದನ್ನು ತೋರಿಸಲು ಪೋಟೋ ಹಾಜರು ಮಾಡಿರುವುದಿಲ್ಲ ಎಂದರೆ ಸರಿ. ನಾವು ಸದರಿ ದಾವಾ ಜಮೀನಿನ ಸ್ವಾಧೀನದಲ್ಲಿ ಇದ್ದೇವೆ ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಮ್ಮ ಕುಟುಂಬದವರು ಯಾವತ್ತು ಒಕ್ಕಲುತನ ಮಾಡಿಲ್ಲ, ವ್ಯಾಪಾರ ಮಾಡುತ್ತೇವೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿ ಯಾವಾಗಲೂ ನಮ್ಮ ಜೊತೆಗೆ ಇರುತ್ತಿದ್ದರು ಹಾಗಾಗಿ ನಮ್ಮ ಖರೀದಿ ಪತ್ರಗಳಿಗೆ ಸಾಕ್ಷಿದಾರರಾಗಿ ಆತನ ಸಹಿ ಪಡೆದುಕೊಂಡಿದ್ದೆವು ಮತ್ತು ಅದರ ದುರುಪಯೋಗ ಪಡೆದುಕೊಂಡು ನಿಡಿ-3ರ ಸುಳ್ಳು ಕ್ರಯ ಪತ್ರ ಸೃಷ್ಟಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು
ಯಾದಗಿರಿ